

ಅಬ್ಬಾ ಚಳಿಯಾಗುತ್ತಿದೆಯೆ?



ಬೆಳ್ಗಣ್ಣ ಜಲಕ್ರೀಡೆಗೆ ಇಳಿಯುವ ಮುನ್ನ

# ಬೆಳ್ಗಣ್ಣನ ಜಲಕ್ರೀಡೆ

**ಮಟಮಟ ಮಧ್ಯಾಹ್ನ ಜಳಕಕ್ಕೆ ಬಂದ ಬೆಳ್ಗಣ್ಣ ಹಕ್ಕಿಗಳ ಹಿಂಡಿನಲ್ಲಿ ಏನೆಲ್ಲಾ ಮಾತುಕತೆ ನಡೆದಿತ್ತು, ಗೊತ್ತೇ?**

**ಎಸ್‌. ಶಿಶುಪಾಲ**

ದಾವಣಗೆರೆ ವಿಶ್ವವಿದ್ಯಾಲಯ ಹಚ್ಚ ಹಸುರಿನ ಪ್ರದೇಶ. ಜ್ಞಾನಾರ್ಜನೆಯ ತಾಣ. ಹಲವಾರು ಮರ, ಗಿಡ, ಹಕ್ಕಿ, ಕೀಟಗಳಿಗೆ ಆಶ್ರಯತಾಣ. ಮಧ್ಯಾಹ್ನದ ಊಟದ ಸಮಯ. ಹಿಂದಿನ ದಿನ ರಾತ್ರಿ ಬಂದ ಮಳೆ ನೆಲವನ್ನು ತೋಯಿಸಿತ್ತು. ಹಚ್ಚ ಹಸುರಿನ ವಿವಿ ಆವರಣ ಮಳೆಯಲ್ಲಿ ತೋಯ್ದು ಕಣ್ಮನಕ್ಕೆ ತಂಪನ್ನೆರೆಯುತ್ತಿತ್ತು.

ಮಟಮಟ ಮಧ್ಯಾಹ್ನದ ಉರಿ ಬಿಸಿಲು, ಒಂದು ಲಘು ನಡಿಗೆಗಾಗಿ ಹೋಗುತ್ತಿದ್ದಾಗ ಅನತಿ ದೂರದಲ್ಲಿ ಮಣ್ಣಿನ ರಸ್ತೆಯ ಮೇಲೆ ಒಂದು ಗುಂಪು ಹಕ್ಕಿಗಳ ಚಟುವಟಿಕೆ ಕಾಣಿಸಿತು. ದೂರದಿಂದಲೇ ಕ್ಯಾಮೆರಾ ಕಣ್ಣಿನಿಂದ ನೋಡಿದೆ. ಬಾಯಿಯಿಂದ ಓಹ್ ಎಂಬ ಉದ್ಗಾರ ತಂತಾನೇ ಹೊರಟಿತು. ರಸ್ತೆಯ ಬದಿ ನಿಂತಿದ್ದ ನೀರಿನಲ್ಲಿ ಹಕ್ಕಿಗಳ ಜಲಕ್ರೀಡೆ ಕಾಣಿಸಿತು. ಕೆಲವು ಹಕ್ಕಿಗಳು ದೂರದಿಂದಲೇ ನೋಡುತ್ತಿದ್ದವು.

ಬಿಸಿಲಿನ ಧಗೆ ಹೆಚ್ಚಿತ್ತು. ಹಕ್ಕಿಗಳ ಮೀಯುವಿಕೆ ಮುಂದುವರೆದಿತ್ತು. ಅವುಗಳ ಜಲಕ್ರೀಡೆಗೆ ತೊಂದರೆ ಆಗದಂತೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಸ್ವಲ್ಪ ಹತ್ತಿರ ಸಾಗಿ ಕ್ಯಾಮೆರಾಗೆ ಕೆಲಸ ಕೊಟ್ಟೆ. ಹಕ್ಕಿಗಳ ಜಲಕ್ರೀಡೆಯನ್ನು ಕಣ್ತುಂಬಿಕೊಳ್ಳುವಂತಾಯಿತು.

ಕೆಂಪು ಕಿಬ್ಬೊಟ್ಟೆಯ ಪಿಕಳಾರ, ಕೆಮ್ಮೀಸೆ ಪಿಕಳಾರ, ಬೆಳ್ಗಣ್ಣ, ಗೀಜಗ, ರಾಟವಾಳಗಳು ಅಲ್ಲಿದ್ದವು. ಪಕ್ಕದಿಂದ ಹಾದುಹೋದ ಮೂರು ನಾಯಿಗಳನ್ನು ಕಂಡು ಹಕ್ಕಿಗಳು ಚದುರಿದವು.

ಗುಬ್ಬಿಗಿಂತ ಚಿಕ್ಕದಾದ ಬೆಳ್ಗಣ್ಣಗಳು (**Indian White Eye**) ಬಹಳ ಚುರುಕಾದ ವಿಶೇಷ ಹಕ್ಕಿಗಳು. ಹಸುರುಮಿಶ್ರಿತ ಹಳದಿ